ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 46 ಇಆಇ 2013

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು-1 ದಿನಾಂಕ 6ನೇ ಅಗಸ್ಟ್ 2013

## ಸುತ್ತೋಲೆ

ವಿಷಯ: ಗಣಕಯಂತ್ರ ಹಾಗೂ ಇತರೆ ಪರಿಕರಗಳ ಜೀವತಾವಧಿಯನ್ನು ನಿರ್ಧರಿಸುವ ಬಗ್ಗೆ.

ಉಲ್ಲೇಖ: ದಿನಾಂಕ 08.01.2013 ರಂದು ನಡೆದ ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿ ಸಭೆಯ ನಡವಳಿಗಳು.

---

1. ಹಲವಾರು ಇಲಾಖೆಗಳು ತಮ್ಮಲ್ಲಿರುವ ಹಳೆಯ ಗಣಕಯಂತ್ರ ಹಾಗೂ ಇತರೆ ಪರಿಕರಗಳ ಜೀವತಾವಧಿ ಮತ್ತು ವಿಲೇವಾರಿ ಮಾಡುವ ಬಗ್ಗೆ ಸರ್ಕಾರದ ಅಭಿಪ್ರಾಯ/ ಆದೇಶವನ್ನು ನೀಡುವಂತೆ ಕೋರುತ್ತಿವೆ. ಇತರೆ ಅಂಶಗಳೊಂದಿಗೆ, ಹಳೆಯ ಗಣಕಯಂತ್ರ ಮತ್ತು ಇತರೆ ಪರಿಕರಗಳ ವಿಲೇವಾರಿ ಬಗ್ಗೆ, ಈ ಹಿಂದೆ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯದ (ಹಿಂದಿನ ಕರ್ನಾಟಕ ಸರ್ಕಾರಿ ಗಣಕ ಕೇಂದ್ರ) ವತಿಯಿಂದ ದಿನಾಂಕ 18.06.1998ರ ಸುತ್ತೋಲೆ ಸಂಖ್ಯೆ ಜಿಸಿಸಿ/ಟಿಎಪಿ/385/97-98ರನ್ವಯ ಕೆಲವು ಮಾರ್ಗಸೂಚಿಗಳನ್ನು ನೀಡಲಾಗಿತ್ತು. ನಂತರ, ಈ ಕುರಿತಂತೆ ಸರ್ಕಾರದ ದಿನಾಂಕ 11.01.2010ರ ಸುತ್ತೋಲೆ ಸಂಖ್ಯೆ ಸಿಆಸುಇ 02 ವಿಮಾಆ 2010ರ ಮೂಲಕ ಕೆಲವು ಸೂಚನೆಗಳನ್ನು ನೀಡಲಾಗಿತ್ತು.

2. ಗಣಕಯಂತ್ರ ಹಾಗೂ ಇತರೆ ಪರಿಕರಗಳ ಜೀವತಾವಧಿಯನ್ನು ನಿರ್ಧರಿಸುವ ಬಗ್ಗೆ ಇತ್ತೀಚೆಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ 08.01.2013ರಂದು ನಡೆದ ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿಯ ಸಭೆಯಲ್ಲಿ ವಿವರವಾಗಿ ಚರ್ಚಿಸಿ, ಹಳೆಯ ನಿರುಪಯುಕ್ತ ಗಣಕಯಂತ್ರ ಹಾಗೂ ಇತರೆ ಗಣಕ ಪರಿಕರಗಳ ಜೀವತಾವಧಿ ನಿರ್ಧರಿಸಲು ಹಾಗೂ ವಿಲೇವಾರಿ ಮಾಡಲು ಕೆಳಕಂಡ ಮಾನದಂಡವನ್ನು ಅನುಸರಿಸಬಹುದೆಂದು ನಿರ್ಣಯಿಸಲಾಯಿತು :-

   (ಅ) ಗಣಕ ಕ್ಷೇತ್ರದಲ್ಲಿ ತಾಂತ್ರಿಕತೆ ತೀವ್ರವಾಗಿ ಬದಲಾವಣೆಯಾಗುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು, 20% ಸವಕಳಿಯೆಂದು ಪರಿಗಣಿಸಿ, ಗಣಕಯಂತ್ರ, ಯು.ಪಿ.ಎಸ್. ಹಾಗೂ ಇತರೆ ಪರಿಕರಗಳ ಜೀವತಾವಧಿಯನ್ನು ಕನಿಷ್ಠ 5 ವರ್ಷಗಳೆಂದು ಪರಿಗಣಿಸುವುದು.

   (ಆ) ಇಲಾಖೆಗಳು ಗಣಕಯಂತ್ರ, ಯು.ಪಿ.ಎಸ್. ಹಾಗೂ ಇತರೆ ಪರಿಕರಗಳನ್ನು ಖರೀದಿಸಿ ಅಳವಡಿಸಿದ 5 ವರ್ಷಗಳ ನಂತರ, ರಿಪೇರಿ ಮಾಡಲು ಸಾಧ್ಯವಾಗದೇ ಇರುವ/ಹಾಳಾಗಿರುವ ಗಣಕಯಂತ್ರ ಮತ್ತು ಇತರೆ ಪರಿಕರಗಳನ್ನು ನಿರುಪಯುಕ್ತ ವಸ್ತುಗಳೆಂದು ನಿರ್ಣಯಿಸಬಹುದು.

   (ಇ) ದಿನಾಂಕ 7.1.2005ರ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 39 ಇಜಿಪಿ 2004 ಮತ್ತು ದಿನಾಂಕ 15.2.2010ರ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 147 ಇಆಇ 2009ರನ್ವಯ ನಿಗದಿಪಡಿಸಿದ ಕಾರ್ಯವಿಧಾನದಂತೆ, ಆಯಾ ಇಲಾಖೆಗಳು ಅವುಗಳ ಇ-ಆಡಳಿತ ವಾರ್ಷಿಕ ಕ್ರಿಯಾ ಯೋಜನೆಗಳ ಅನುಮೋದನೆ ಪಡೆಯುವ ಸಂದರ್ಭದಲ್ಲಿ, ವಿಲೆ ಮಾಡಬಹುದಾದ ಗಣಕಯಂತ್ರ ಹಾಗೂ ಇತರ ಪರಿಕರಗಳ ವಿವರಗಳನ್ನು ನೀಡಿ, ಇ-ಆಡಳಿತ ವಾರ್ಷಿಕ ಕ್ರಿಯಾ ಯೋಜನೆಗಳ ಅನುಮೋದನಾ

ಸಮಿತಿಯ ಹಾಗೂ ಆಯಾ ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ತಾಂತ್ರಿಕಾ ಸಲಹಾ ಸಮಿತಿಯ ಅನುಮೋದನೆ ಪಡೆಯತಕ್ಕದ್ದು.

(ಈ) ನಿರುಪಯುಕ್ತ ವಸ್ತುಗಳೆಂದು ನಿರ್ಣಯಿಸಿದ ಗಣಕಯಂತ್ರ, ಯು.ಪಿ.ಎಸ್. ಹಾಗೂ ಇತರೆ ಪರಿಕರಗಳನ್ನು

(1) Buy-back ಅಥವಾ

(2) ಇ-ವೇಸ್ಟ್ ನ್ನು ವಿಲೇವಾರಿ ಮಾಡಲು ಭಾರತ ಸರ್ಕಾರ ನೀಡಿರುವ ಮಾರ್ಗಸೂಚಿಗಳಂತೆ, ಸಾರ್ವಜನಿಕ ಹರಾಜು ಮೂಲಕ ವಿಲೇವಾರಿ ಮಾಡುವುದು.

3. ಸರ್ಕಾರದ ಇಲಾಖೆಗಳು ಹಳೆಯ ನಿರುಪಯುಕ್ತ ಗಣಕಯಂತ್ರ ಮತ್ತು ಇತರೆ ಗಣಕ ಪರಿಕರಗಳ ಜೀವತಾವಧಿ ನಿರ್ಧರಿಸಲು ಹಾಗೂ ಅವುಗಳ ವಿಲೇವಾರಿ ಮಾಡಲು ಮೇಲಿನ ಕಂಡಿಕೆ 2ರಲ್ಲಿ ನಮೂದಿಸಿದ ಮಾರ್ಗಸೂಚಿಗಳನ್ನು ಪಾಲಿಸಬಹುದೆಂದು ಈ ಮೂಲಕ ತಿಳಿಸಿದೆ.

4. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರು ಈ ಸುತ್ತೋಲೆಯನ್ನು ಅವರ ವ್ಯಾಪ್ತಿಗೆ ಬರುವ ಇಲಾಖೆಗಳ ಗಮನಕ್ಕೆ ತರಲು ಕೋರಿದೆ.

5. ದಿನಾಂಕ 20.7.2013ರ ಟಿಪ್ಪಣಿ ಸಂಖ್ಯೆ:ಆಇ 548 ವೆಚ್ಚ-12/2013ರನ್ವಯ ಆರ್ಥಿಕ ಇಲಾಖೆ ನೀಡಿದ ಸಹಮತಿಯಂತೆ ಈ ಸುತ್ತೋಲೆಯನ್ನು ಹೊರಡಿಸಿದೆ.

(ಐ.ಎಸ್.ಎನ್.ಪ್ರಸಾದ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ.
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಇ-ಆಡಳಿತ)

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಇವರು ಈ ಸುತ್ತೋಲೆಯನ್ನು ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಅದರ 500 ಪ್ರತಿಗಳನ್ನು ಪೀಠಾಧಿಕಾರಿ-1, ಸಿಆಸುಇ (ಇ-ಆಡಳಿತ), ಇವರಿಗೆ ಕಳುಹಿಸಲು ಕೋರಿದೆ.

ಪ್ರತಿ:

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳವರು.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯದರ್ಶಿಗಳವರು.
3. ಮಹಾಲೇಖಪಾಲಕರು, ಲೆಕ್ಕಪತ್ರ 1 ಮತ್ತು 2, ಕರ್ನಾಟಕ, ಬೆಂಗಳೂರು.
4. ಎಲ್ಲಾ ಇಲಾಖಾ ಮುಖ್ಯಸ್ಥರು.
5. ಶಾಖಾ ರಕ್ಷ ಕಡತ /ಬಿಡಿಪ್ರತಿಗಳು.